# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.158/2021

C.W.3
P.W. 2

ದಿನಾಂಕಃ 06-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ಶನಿವಾರಮ್ಮ |
| ಗಂಡನ ಹೆಸರು | ಃ ಮಸ್ತಪ್ಪ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ ಗೃಹಿಣಿ |
| ವಾಸ | ಃ ಗೂಲಹಳ್ಳಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಗೊತ್ತು. ನಾವು ಆದಿಕರ್ನಾಟಕ ಜಾತಿಗೆ ಸೇರಿದವರು. {SC) ಮೃತ ಸಂಜೀವರಾಯಪ್ಪ ನನ್ನ ಮಗ. ನನಗೆ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ ಇದ್ದಾರೆ. ನನ್ನ ಮಗ ಈಗ ತೀರಿಕೊಂಡಿರುತ್ತಾರೆ. ನನ್ನ ಯಜಮಾನರಿಗೆ ಇಬ್ಬರು ಹೆಂಡತಿಯರಿದ್ದು ಮೊದಲನೇ ಹೆಂಡತಿ ತೀರಿಹೋಗಿದ್ದು , ನಾನು ಎರಡನೇ ಹೆಂಡತಿಯಾಗಿರುತ್ತೇನೆ. ಮೃತ ಸಂಜೀವರಾಯಪ್ಪ ಮೊದಲನೇ ಹೆಂಡತಿಯಮಗ .

2) ಈಗ 3 ವರ್ಷದ ಕೆಳಗೆ ನಾನು ಮತ್ತು ನನ್ನ ಯಜಮಾನರು ಐ ಡಿ

ಹಳ್ಳಿಯಲ್ಲಿ ಇರುವ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೇವು. ಹನುಮಂತರಾಯಪ್ಪರಮರ ನನ್ನ ದೊಡ್ಡಮಾವನ ಮಗನಾಗಿದ್ದು ಅವರು ನನಗೆ ದೂರವಾಣಿ ಕರೆ ಮಾಡಿ ನಿನ್ನ ಮಗ ಸಂಜೀವರಾಯಪ್ಪ ನೇಣು ಹಾಕಿಕೊಂಡು ತೀರಿಕೊಂಡಿರುತ್ತಾನೆ ಎಂದು ತಿಳಿಸಿದರು. ನಂತರ ನಾನು ಮನೆಗೆ ಬಂದು ನೋಡಿರುತ್ತೇನೆ . ನಾನು ಮನೆಗೆ ಬಂದು ನೋಡಿದಾಗ ನನ್ನ ಮಗ ನೇಣು ಹಾಕಿಕೊಂಡು ಸ್ಥಿತಿಯಲ್ಲಿಯೇ ಇದ್ದನು. ಮಂಜುನಾಥ ಮತ್ತು ನರಸಪ್ಪ ಸಂಜೀವರಾಯಪ್ಪರ ಮೇಲೆ ಗಲಾಟೆ ಮಾಡಿದ ಕಾರಣ ಸಂಜೀವರಾಯಪ್ಪರವರುಆತ್ಮಹತ್ಯೆಮಾಡಿಕೊಂಡಿರುತ್ತಾನೆ ಎಂದು ಚಾಸಾ-2 ರವರಿಂದ ತಿಳಿದು ಬಂದಿತು. ಮಂಜುನಾಥ ಮತ್ತು ನರಸಪ್ಪ ರವರು ಗಲಾಟೆ ಮಾಡಿ ಅವರು ನರಸಪ್ಪರವರು ನೀನು ಏಕೆ ಬದುಕಿದ್ದೀಯಾ ಎಂದು ಬೈದಿದ್ದಕ್ಕೆ ನನ್ನ ಮಗನ ಮನನೊಂದು ನೇಣು ಹಾಕಿಕೊಂಡು ಸತ್ತೀರುತ್ತಾನೆ. ಚಾಸಾ-2 ರವರು ಸಂಜೀವರಾಯಪ್ಪ ರವರ ನೇಣು ಹಾಕಿಕೊಂಡಿದ್ದ ಸ್ಥಳದಲ್ಲಿ ಸಿಕ್ಕಿದ್ದಂತಹ ಒಂದು ಚೀಟಿಯನ್ನು ಲಕ್ಷ್ಮೀನಾರಾಯಣರವರಿಗೆ (ಎ-3) ಕೊಟ್ಟಿರುತ್ತಾರೆ. ನನ್ನ ಸಾವಿಗೆ ನರಸಪ್ಪ ಮತ್ತು ಮಂಜುನಾಥ ಎಂಬುವರು ಕಾರಣ ಎಂದು ನನ್ನ ಮಗ ಡೆತ್ ನೋಟ್ ಬರೆದಿಟ್ಟು ಸತ್ತಿದ್ದನು. 3 ನೇ ಆರೋಪಿ ಲಕ್ಷ್ಮೀನಾರಾಯಣ ಪೊಲೀಸ್ ಠಾಣೆಯಲ್ಲಿ ಹರಿದು ಹಾಕಿರುತ್ತಾನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಲವಾರು ಪೀಸ್ ಆದ ಒಂದು ಡೆತ್ ನೋಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಸ್ಥಳದಲ್ಲಿ 3 ನೇ ಆರೋಪಿಯು ಹರಿದಿದ್ದಾಗಿ ನುಡಿದಿರುತ್ತಾರೆ. ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಚಾಸಾ-1 ರವರು ಈ ಬಗ್ಗೆ ದೂರನ್ನು

ನೀಡಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಮತ್ತು ನಾನು ಹೇಳಿಕೆಯನ್ನು ನೀಡಿರುತ್ತೇನೆ.

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರು ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರ ಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಪಿ ಪಿ ರವರಿಂದಃ-</u>

3.) ನಮ್ಮ ಊರಿನಲ್ಲಿ ಅಶ್ವಥನ ಕಟ್ಟೆ ಇದೆ ಅಂದರೆ ಸರಿ . 1 ನೇ ಆರೋಪಿಯು ನಾಯಕ ಜಾತಿಗೆ ಸೇರಿದವರು, 2 ಮತ್ತು 3 ನೇ ಆರೋಪಿತರು ಕುಂಚಿಟಿಗ ಜನಾಂಗಕ್ಕೆ ಸೇರಿದವರು ಅಂದರೆ ಸರಿ . ಚಾಸಾ-2 ರವರು 1 ನೇ ಆರೋಪಿಯ ಹೆಂಡತಿಗೆ ಮೃತ ಬೈದಿದ್ದನು ಎಂದು ಚಾಸಾ-2 ರವರು ನನಗೆ ತಿಳಿಸಿದನು ಅಂದರೆ ಸರಿ . ಸದರಿ ವಿಚಾರವನು 1 ನೇ ಆರೋಪಿಯ ಹೆಂಡತಿ 1 ನೇ ಆರೋಪಿಗೆ ತಿಳಿಸಿದಾಗ 1 ನೇ ಆರೋಪಿ ಹಾಗೂ ಆತನು ವಾಸವಿರುವ ಮನೆಯ

ಮಾಲೀಕರಾದಂತಹ ಮಂಜುನಾಥ್ ಇಬ್ಬರು ಸೇರಿ ದಿ 17-11-19 ರಂದು ರಾತ್ರಿ 8 ಗಂಟೆ ಸಮಯದಲ್ಲಿ ನನ್ನ ಮಗ ಅಶ್ವಥನ ಕಟ್ಟೆಯ ಬಳಿ ಕುಳಿತಿದ್ದಾಗ ಆತನಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಮೈಕೈಗೆ ಹೊಡೆದು , ನನ್ನ ಮಗನೇ ಇನ್ನೊಂದು ಸಾರಿನಮ್ಮ ತಂಟೆಗೆ ಬಂದರೆ ನಿನ್ನನ್ನು ಸಾಯಿಸುತ್ತೇನೆಂದು ಪ್ರಾಣಬೆದರಿಕೆ ಹಾಕಿದ್ದರು ಎಂದು ನನಗೆ ತಿಳಿಸಿದ್ದರು ಅಂದರೆ ಸರಿ . ಇಷ್ಟಕ್ಕೂ ಸುಮ್ಮನೆ ಆಗದ 1 ಮತ್ತು 2 ನೇ ಆರೋಪಿತರು ಮರುದಿನ ಅಂದರೆ ದಿ 18-11-19 ರಂದು ಬೆಳಗ್ಗೆ 10 ಗಂಟೆ ಸಮಯದಲ್ಲಿ ನಿಮ್ಮ ಮನೆಯ ಹತ್ತಿರ ಬಂದು ನಿಮ್ಮ ಮಗ ಸಂಜೀವರಾಯಪ್ಪನಿಗೆ ಗಲಾಟೆ ಮಾಡಿ ಮನಸೋ ಇಚ್ಚೆ ಬೈದು ಕೈಗಳಿಂದ ಹೊಡೆದು ನೀನು ಸತ್ತದಾರೂ ಸಾಯಿ ನನ್ನ ಮಗನೆ ಊರಿನಲ್ಲಿ ಯಾಕೆ ಇದ್ದೀಯಾ ಎಂದು ಕಿರುಕುಳ ನೀಡಿದ್ದರು ಅಂದರೆ ಸರಿ . ನಂತರ 1 ಮತ್ತು 2 ನೇ ಆರೋಪಿಗಳು ಈ ರೀತಿ ಗಲಾಟೆ ಮಾಡಿದ್ದು ಮತ್ತು ಹಲ್ಲೆ ಮಾಡಿದ್ದು ಮತ್ತು ಅವಾಚ್ಯ ಶಬ್ದಗಳಿಂದ ಬೈದಿದ್ದರಿಂದ ಅವರುಗಳ ಪ್ರಚೋದನೆಯಿಂದ ದಿ 18-11-19 ರಂದು ನಮ್ಮ ಮನೆಯಲ್ಲಿ ನಾವು ಯಾರು ಇಲ್ಲದಿದ್ದಾಗ ನಮ್ಮ ಮನೆಯ ರೂಂ ನಲ್ಲಿ ಬೆಳಗ್ಗೆ 10 ಗಂಟೆಯಿಂದ 11 ಗಂಟೆಯ ನಡುವೆ ರೂಂ ಮೇಲ್ಛಾವಣಿಯಲ್ಲಿ ಸೀಟ್ ಗೆ ಅಡ್ಡಲಾಗಿ ಹಾಕಿದ್ದ ಕಬ್ಬಿಣದ ಪೈಪ್ ಗೆ ವೇಲ್ ಬಟ್ಟೆಯಿಂದ ತಾನೇನೇಣುಹಾಕಿಕೊಂಡು ಮೃತಪಟ್ಟಿರುತ್ತಾನೆಂದು ನನಗೆ ತಿಳಿದು ಬಂತು ಅಂದರೆ ಸರಿ . ಅಲ್ಲಿ ಸ್ಥಳದಲ್ಲಿ ಸಿಕ್ಕಿದ್ದಂತಹ ಡೆತ್ ನೋಟ್ ನ್ನು 3 ನೇ ಆರೋಪಿಗೆ ಓದಲು ಕೊಟ್ಟಿದ್ದು 3 ನೇ ಆರೋಪಿಯು ಸದರಿ ಚೀಟಿಯಲ್ಲಿ ಬರೆದ ವಿಷಯಯಾರಿಗೂ

ಗೊತ್ತಾಗದಿರಲಿಯೆಂದು ಹರಿದು ಹಾಕಿರುತ್ತಾರೆ ಅಂದರೆ ಸರಿ. 1 ಮತ್ತು 2 ನೇ ಆರೋಪಿಗಳು ನೀಡಿದ ಕಿರುಕುಳವನ್ನು ತಾಳಲಾರದೇ ಮನನೊಂದು ಮಗ ಆತ್ಮಹತ್ಯೆ ಮಾಡಿಕೂಂಡಿರುತ್ತಾನೆಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಅಂದರೆ ಸರಿ .

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ **BKPS** ವಕೀಲರಿಂದಃ

4) ನನ್ನ ಗಂಡನಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿಯ ಹೆಸರು ರಾಮಕ್ಕ, ನನ್ನ ಹೆಸರು ಶನಿವಾರಮ್ಮ. ರಾಮಕ್ಕನಿಗೆ ಒಬ್ಬನೇ ಮಗ. ನನಗೆ ಇಬ್ಬರು ಹೆಣ್ಣು ಮಕ್ಕಳು. ನಾನು ಮತ್ತು ನನ್ನ ಯಜಮಾನರು ಹಾಗೂ ನನ್ನ ಮಕ್ಕಳು ಜನಕೋಟೆಯಲ್ಲಿ ಇದ್ದೇವು,ಸಾಕ್ಷಿ ಮುಂದುವರೆದು ನನಗೆ ಆರೋಗ್ಯ ಸರಿಯಿಲ್ಲದ ಕಾರಣ ಜನಕೋಟೆಯಲ್ಲಿ ವಾಸವಿದ್ದೇವು. ಜನಕೋಟೆಗೂ ಮತ್ತು ಗೂಲಹಳ್ಳಿಗೂ ಎಷ್ಟು ಅಂತರವಿರುತ್ತದೆ ಅಂದರೆ ಸುಮಾರು10 ಕಿ.ಮೀ ಇರುತ್ತದೆ. ರಾಮಕ್ಕ ನಿಧಾನರಾದ ನಂತರ ಮೃತ ಸಂಜೀವರಾಯಪ್ಪ ಊರಿನಲ್ಲಿ ಒಬ್ಬನೇ ಇದ್ದ ಅಂದರೆ ಸರಿ . ನನ್ನ ಮೃತ ಮಗ ಛೌಟರಿ ಕೆಲಸಕ್ಕೆ ಹೋಗುತ್ತಿದ್ದ. ಮೃತ ಸಂಜೀವರಾಯಪ್ಪ ನಿಗೂ ಮತ್ತು ನನಗೂ ಆಗುತ್ತಿರಲಿಲ್ಲ ಅಂದರೆ ಸರಿಯಲ್ಲ . ಮೃತ ಸಂಜೀವರಾಯಪ್ಪನು ಊರಿನಲ್ಲಿ ಪುಂಡಾಟಿಕೆ ಮಾಡಿಕೊಂಡಿದ್ದ ಅಂದರೆ ಸರಿಯಲ್ಲ. ಮೃತ ಸಂಜೀವರಾಯಪ್ಪನು ವಯಸ್ಕನು ಆದರೂ ಸಹ ನಾವು ಅವನ ಮದುವೆಯ ಬಗ್ಗೆ ಗಮನ ಹರಿಸದೇ ಮತ್ತು ಆತನ ಕಷ್ಟ ಸುಖಗಳ ಬಗ್ಗೆ ನಾವು ಗಮನ ಹರಿಸಿಲ್ಲ ಅಂದರೆ ಸರಿಯಲ್ಲ. ಆಗ ನಾನು ಮತ್ತು ಮೃತ

ಸಂಜೀವರಾಯಪ್ಪನಿಗೂ ಮತ್ತು ನನ್ನ ಗಂಡನ ಮಸ್ತಪನ ನಡುವೆ ಜಗಳ ತಂದು ಇಟ್ಟೆ ಅಂದರೆ ಸರಿಯಲ್ಲ. ಸದರಿ ಕಾರಣದಿಂದ ಮೃತ ಸಂಜಿವರಾಯಪ್ಪ ಇದರಿಂದ ಮನನೊಂದಿ ನನ್ನ ತಾಯಿ ಬದುಕಿದ್ದಾಗೆ ಈ ರೀತಿ ಆಗುತ್ತಿರಲಿಲ್ಲವೆಂದು ಕೊಳ್ಳುತ್ತಿದ್ದ ಅಂದರೆ ಸರಿಯಲ್ಲ. ಚಾಸಾ-2 ರವರ ಫೋನ್ ನಂಬರ್ ನನಗೆ ಗೊತ್ತಿಲ್ಲ. ನನ್ನ ಫೋನ್ ನಂಬರ್ ಸಹ ಗೊತ್ತಿಲ್ಲ. ಚಾಸಾ-2 ರವರುನಾನು ಆಸ್ಪತ್ರೆಯಲ್ಲಿ ಇದ್ದಾಗ ಯಾವುದೇ ದೂರವಾಣಿ ಕರೆ ಮಾಡಿಲ್ಲ ಅಂದರೆ ಸರಿಯಲ್ಲ. ನಮ್ಮ ಕಿರುಕುಳದಿಂದ ಸಂಜೀವರಾಯಪ್ಪ ಮೃತಪಟ್ಟಿದ್ದರು ಸಹ ಹನುಮಂತರಾಯಪ್ಪರವರು ಫೋನ್ ಮಾಡಿದ ನಂತರ ಸುಳ್ಳು ಕೇಸ್ ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಚಾಸಾ-1 ಮತ್ತು 2 ಅಣ್ಣ ತಮ್ಮಂದಿರು ಅಂದರೆ ಸರಿ . ಚಾಸಾ-2 ಸ್ವಲ್ಪ ಬುದ್ದಿವಂತ ಅಂದರೆ ಸರಿಯಲ್ಲ. ನಾನು, ಚಾಸಾ-1 , 2 ರವರು ಪೂಲೀಸರ ಜೊತೆ ಶಾಮಿಲಾಗಿ ಆರೋಪಿಗಳ ವಿರುದ್ದ ಸುಳ್ಳು ಕೇಸು ದಾಖಲು ಮಾಡಿದ್ದೇವೆ ಅಂದರೆ ಸರಿಯಲ್ಲ. ಫೋನ್ ಎಷ್ಟು ಹೊತ್ತಿಗೆ ಬಂದಿತು ಎಂದು ಗೊತ್ತಿಲ್ಲ. ನಾನು ಹೋದಾಗ ಸಂಜೆ 6 ರಿಂದ 6.30 ಆಗಿತ್ತು. ಗೂಲಹಳ್ಳಿಗೆ ನಾನು,ಚಾಸಾ-1 , ನಾಗರಾಜಪ್ಪ ಎಂಬುವರು ಹೋದೆವು. ಆ ಸಮಯದಲ್ಲಿ ಮನೆಯ ಬಳಿ ಜನ ಸೇರಿದ್ದರು. ನಾನು ನನ್ನ ಮಗನ ನೋಡಿ ಮನಸ್ಥಿತಿ ಒಂದು ತರಹ ಆಯಿತು ಆದ್ದರಿಂದ ಎಷ್ಟು ಜನರು ಬಂದಿದ್ದರು ಎಂದು ನನಗೆ ನೋಡಲು ಆಗಲಿಲ್ಲ. ಆ ಸಮಯದಲ್ಲಿ ಊರಿನ ಜನರು ಇದ್ದರು, ಅವರ ಹೆಸರುಗಳು ನನಗೆ ಹೇಳಲುಬರುವುದಿಲ್ಲ. ನಾನು ಮನೆಯಬಳಿ ಹೋದಾಗ ಮನೆಯ ಹೊರಗಿನ ಬಾಗಿಲು ತೆರೆದಿತ್ತು,ಒಳಗಿನ ಬಾಗಿಲು ಮುಚ್ಚಿತ್ತು. ಹೊರಗಡೆ ಬಾಗಿಲು ತೆಗೆದಿತ್ತು ಮತ್ತು ಒಳಗಡೆ ಬಾಗಿಲುತೆರೆದಿತ್ತು ಮನೆಯಬಳಗೆ

ಹೋಗಿ ಬಂದು ಜನರು ನೋಡುತ್ತಿದ್ದರು ಅಂದರೆ ಸರಿ . ಪೂಲೀಸರು ಬರುವವರಿಗೆ ಮೃತ ಸಂಜೀವರಾಯಪ್ಪನ ದೇಹವನ್ನು ಯಾರು ಮುಟ್ಟಿರಲಿಲ್ಲ. ಪೊಲೀಸರು ಎಷ್ಟು ಜನರು ಬಂದರು ಎಂದು ನನಗೆ ಗೊತ್ತಿಲ್ಲ. ಪೊಲೀಸರೇ ದೇಹವನ್ನು ಇಳಿಸಿ ಅಂಬ್ಯೂಲೆನ್ಸ್‌ಗೆ ಹಾಕಿಕೊಂಡು ಹೋದರು. 3 ನೇ ಆರೋಪಿ ಯು ಚೀಟಿಯನ್ನು ಹರಿದು ಹಾಕಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅದರಲ್ಲಿ ಇರುವ ಬರವಣಿಗೆ ನನ್ನ ಮಗನದ್ದು ಅಲ್ಲ ಅಂದರೆ ಸರಿಯಲ್ಲ. ನಾವು ಪೊಲೀಸರ ಜೊತೆ ಶಾಮಿಲಾಗಿ ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲು ಮಾಡಿದ್ದೇವೆ ಅಂದರೆ ಸರಿಯಲ್ಲ. ಸದರಿ ಚೀಟಿಯಲ್ಲಿ ಮಂಜುನಾಥ ಮತ್ತು ನರಸಪ್ಪ ರವರ ಹೆಸರುಗಳು ಇಲ್ಲ ಅಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಮತ್ತು ಅಭಿಯೋಜನೆಯ ಪಾಟೀ ಸವಾಲಿನಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಅಂದರೆ ಸರಿಯಲ್ಲ. ಯಾವುದೇ ಆರೋಪಿತರು ನೀನು ಹೋಗಿ ಸಾಯಿ ಎಂದು ಅವನ ಸಾವಿಗೆ ಪ್ರಚೋದನೆ ಮಾಡಿಲ್ಲ ಅಂದರೆ ಸರಿಯಲ್ಲ. ಮೃತ ಸಂಜೀವರಾಯಪ್ಪನ ಸಾವಿಗೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂದವಿಲ್ಲದಿದ್ದರೂ ಸಹ ನೀವು ಮತ್ತು ಚಾಸಾ-1,2 ರವರು ಸೇರಿ ಸುಳ್ಳು ದೂರು ದಾಖಲಿಸಿದ್ದೀರಿ ಅಂದರೆ ಸರಿಯಲ್ಲ . ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಬರೆದುಕೊಂಡಿಲ್ಲ ಅಂದರೆ ಸರಿಯಲ್ಲ. ರಾಮಕ್ಕಳು ಸಹ ನಿನ್ನ ಕಿರುಕುಳದಿಂದ ಮೃತಪಟ್ಟಿರುತ್ತಾಳೆ ಅಂದರೆ ಸರಿಯಲ್ಲ. ರಾಮಕ್ಕಳ ನಿಧಾನದ ನಂತರ ಆತನನ್ನು ಯಾರುನೋಡಿಕೊಳ್ಳದ ಕಾರಣ ಆತ ಮೃತಪಟ್ಟಿರುತ್ತಾನೆ

ಅಂದರೆ ಸರಿಯಲ್ಲ. ಮೃತ ಸಂಜೀವರಾಯಪ್ಪನ ಸಾವಿಗೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂದವಿಲ್ಲ ಅಂದರೆ ಸರಿಯಲ್ಲ. ಆರೋಪಿಗಳು ಮೃತ ಸಂಜೀವರಾಯಪ್ಪನಿಗೆ ಆತ್ಮಹತ್ಯೆಮಾಡಿಕೊಳ್ಳುವಂತೆ ಯಾವುದೇ ಪ್ರಚೋದನೆ ನೀಡಿರುವುದಿಲ್ಲ ಅಂದರೆ ಸರಿಯಲ್ಲ.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ತುಮಕೂರು